Doc No T-8-2

(1)

Regd No BG 155 7-9-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತದ ಪ್ರಜಾಪ್ರಭುತ್ವ ಗಂಡಾಂತರದಲ್ಲಿ

ಮುಸ್ಲಿಮರಲ್ಲಿನ ವಿವಾಹವಿಚ್ಛೇದನ

ಬೊಂಬಾಯಿ— ಮುಸ್ಲಿಂ ಪತಿಗೆ ಇರುವ ಅನಿರ್ಬಂಧ ಅಧಿಕಾರದ ಮೇಲೆ ಹತೋಟಿ ವಿಧಿಸುವ ಬಗ್ಗೆ ಒಂದು ಸೌಹಾರ್ದ ನ್ಯಾಯಮಂಡಲಿ ಏರ್ಪಡಿಸಲು ಮುಸ್ಲಿಂ ಶಾಸನಗಳಬಗ್ಗೆ ಅಧಿಕಾರವಾಣಿ ಹೊಂದಿರುವ ಪೊ|| ಫಿಸೀ ಸಲಹೆ ಮಾಡಿರುವರು.

"ಸತ್ಯವಾದಿ"ಯ ಸ್ವರ್ಣೋತ್ಸವ

ಭಾನುವಾರ **28-9-1969**

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ಸೇರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೇರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ತಕ್ಷಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಭೀಕರ ಕೊಲೆ

ಕೋಲಾರ— ಜಾಡುಮನಹಳ್ಳಿಯಲ್ಲಿ ಹಳ್ಳಿ ಪುರೋಹಿತನು ಪಕ್ಕದ್ಮನೆಯವನೊಡನೆ ಮಾಡುತ್ತಿದ್ದನು : ಇವನು ಚಿಕಿತ್ಸೆ ನಡೆಸಿದರೂ ದನಗಳು ಸಾಯುತ್ತಿದ್ದವು. ಒಬ್ಬ ಯುವಕನು ಇವನು ಮಾಟಗಾರನೆಂದು ಆವನನ್ನು ಹೊಡೆಯಲು ಮನೆಗೆ ನುಗ್ಗಲು ಪುರೋಹಿತರು ಸರಿಯಾದನು; ದೊಣ್ಣೆ ಏಟು ಅವನ ಹೆಂಡತಿಯ ತಲೆಗೆ ಬಲವಾಗಿ ಬಿದ್ದು, ಸತ್ತಳು — ಯುವಕನನ್ನು ಹಿಡಿದು ಪೋಲಿಸರಿಗೆ ವಶಪಡಿಸಲಾಯಿತು.

○

ರಾಜರ ಔದಾರ್ಯ

ಖಟ್ಮಂಡು— ರಾಜ ಮಹೇಂದ್ರರು ನೇಪಾಳದ ಟಿಕ್ಕಿನಲ್ಲಿ 47000 ಭೂಮಿಯನ್ನು ಬಡ ರೈತರಿಗೆ ಉಚಿತವಾಗಿ ಹಂಚಿದರು. ಇದರಲ್ಲಿ ಅವರ ಮೇಲಿನ ತಮ್ಮ ಮಾಲೀಕತ್ವವನ್ನು ತ್ಯಾಗ ಮಾಡಿರುವರು — ಹೆಕ್ಟರು ಲೆಕ್ಕದಲ್ಲಿ ಇದು 32000 ವಾಗಿ ವಾರ್ಷಿಕ ಗೇಣಿ ರೂ. 20 ದೊರೆಯುವದು. ಗೇಣೀದಾರರೇ ಭೂ ಸ್ವಾಮಿಗಳಾಗುವರು.

★

ಕ್ರಿಕೆಟ್ ಪಂಥ

ಬೊಂಬಾಯಿ— ನ್ಯೂಜಿಲ್ಯಾಂಡು ಕ್ರಿಕೆಟ್ ತಂಡವು 5 ಪಂಥಗಳನ್ನು ಆಡಲು ತಾ|| 13 ಬರುವುದು.

●

ಉಪವಾಸ ಸೆರೆಕೆ

ಹಾಸನ— ಮಾಜಿ ಪೌರಸಭಾ ಸದಸ್ಯ ಶ್ರೀ ಹೆಚ್ ಎಂ ವೆಂಕಟಪ್ಪನವರು. ಮುನಿಸಿಪಾಲಿಟಿಯಲ್ಲಿ ಅಕ್ರಮಗಳು ಕೊನೆಗಾಣದಿದ್ದರೆ ತಾವು ತಾ|| 18 ರಂದು ವಿಧಾನ ಸೌದದ ಮುಂದೆ 24 ಗಂಟೆಗಳ ಅನ್ನ ಸತ್ಯಾಗ್ರಹ ಆಚರಿಸುವದಾಗಿ ಸೂಚಿಸಿ ಮುಂತ್ರಿಗಳಿಗೆ ಬರೆದಿರುವರು

ಏಕಮಾತ್ರ ಮಹಿಳಾ ಡೆಪ್ಯೂಟಿ

ಹೈದರಾಬಾದು— ಹೈಕೋರ್ಟು ಆಜ್ಞೆಯಂತೆ ಬಿಡಲ್ಪಟ್ಟ ಡೆಪ್ಯೂಟಿ ಆಗಿದ್ದ ಶ್ರೀಮತಿ ಈಶ್ವರಿಬಾಯಿಯು, ಶಾಸನಸಭೆಯಲ್ಲಿ, ಸ್ಥಾನಬದ್ಧ ಶಾಸನದಂತೆ ಬಂಧಿಸಲ್ಪಟ್ಟದ್ದ ಪ್ರಸ್ತಪನು ಮಹಿಳೆ ತಾನೆಂದು ಹೇಳಿದರು : ತನ್ನನ್ನು ಬಂಧಿಸಲು 4 ಲಾರಿ ತುಂಬ ಪೋಲೀಸರು ಬಂದಿದ್ದರೆಂದು ಹೇಳಿದರು : ಮಹಿಳೆಯರ ಈ ರೀತಿ ವರ್ತನೆ ಬ್ರಿಟಿಷರ ಕಾಲದಲ್ಲೂ ನೈಜಾಮರ ಕಾಲದಲ್ಲೂ ನಡೆದಿಲ್ಲವೆಂದು ಹೇಳಿದರು.

★

ಜೇನು ಸಮ್ಮೇಳನ

ಪಶ್ಚಿಮ ಜರ್ಮನಿ ಮ್ಯೂನಿಚ್ ನಗರದಲ್ಲಿ ನಡೆದ ಜೇನುಹುಳುಗಳ ನಿಪುಣರ ಸಮ್ಮೇಳನದಲ್ಲಿ 60 ದೇಶಗಳು ಪ್ರತಿನಿಧಿಸಿದ್ದವು — ಜರ್ಮನರು ಒಂದು ವರ್ಷಕ್ಕೆ (ವಿಶ್ವದ ದಾಖಲೆಯಷ್ಟು) 60000 ಟನ್ ಜೇನುತುಪ್ಪ ಸೇವಿಸುತ್ತಾರೆ — ಸಮ್ಮೇಳನದಲ್ಲಿ ವಿವಿಧ ರೀತಿಯ 170 ಭಾಷಣಗಳಾದವು.

★

ಕಂಪ್ಯೂಟರ್ ರೀತಿ ಮದುವೆ

ಜರ್ಮನಿಯಲ್ಲಿ ಕಂಪ್ಯೂಟರು ಮೂಲಕ ದಂಪತಿಗಳ ಆಯ್ಕೆಯಲ್ಲಿ ಹೆಚ್ಚು ವಿಶ್ವಾಸ ಕಂಡುಬಂದಿದೆ — ಒಂದಕ್ಕೊಂದು ಹೋಲುವುದು ಜೀವಿತವನ್ನು ಸಹಿಸುವಂತೆ ಮಾಡುವುದು ಎಂಬುದು ಆದರ ತತ್ವ.

★

ಯಥೇಚ್ಛ ನಿಕ್ಕಲ್ ಅದುರು

ಸುಕಿಂದಾ ತಾಲ್ಲೂಕಿನ ಪೂರ್ವ ಬ್ಲಾಕ್ ನಲ್ಲಿ 15 ಮಿಲಿಯ ಟನ್ ನಿಕ್ಕಲ್ ಅದುರು ಸಿಕ್ಕುವಂತೆ ಕಂಡುಬಂದಿದೆ.

★

ಅಹಮದಾಬಾದ್— ಪ್ರಧಾನಿ ಇಂದಿರಾರವರು ಈಗಿನ ಮನೋಭಾವನೆ ಲೆಕ್ಕಿಸಿದರೆ, ತಾವು ಮತ್ತೆ ಭಾರತ ಮಂತ್ರಿಮಂಡಲಕ್ಕೆ ಸೇರುವ ಸಾಧ್ಯತೆ ಇಲ್ಲವೆಂದು ಭಾರೀ ಬಹಿರಂಗ ಸಭೆಯಲ್ಲಿ ಮಾಜಿ ಉಪ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಹೇಳಿದರು — ಈಗಿನ ಘಟನೆಗಳು ದೇಶದ ಪ್ರಜಾಸ್ವಭುತ್ವ ರೀತಿಗೆ ಅಪಾಯಕರವಾಗಿವೆ ಎಂದರು.

★

ನವದೆಹಲಿ— ಗಡಿನಾಡು ಗಾಂಧಿಯವರಿಗೆ ಅರ್ಪಿಸುವ ನಿಧಿಗೆ ಉದಾರವಾಗಿ ಕೊಡುವಂತೆ ರಾಜರ ಸಂಸ್ಥೆ ವಿನಂತಿಸಿದೆ.

ಬೆಂಗಳೂರು— ದೇಶದಲ್ಲಿ ಮತ್ತಿತರ ಕಡೆಗಳಲ್ಲಿ ಶಾಸನಬದ್ಧ ಆಡಳಿತ ಮಾತ್ರ ಎಲ್ಲ ವಿಧದ ಘರ್ಷಣೆಗಳನ್ನು ತಪ್ಪಿಸಬಲ್ಲುದೆಂದು ಉಪರಾಷ್ಟ್ರಾಧ್ಯಕ್ಷ ಶ್ರೀ ಸಾಠಕ ಹೇಳಿದರು.

ಕಾನ್ಪುರ— ಕಾಂಗ್ರೆಸ್ಸು ಒಂದು ಯಥಾಸ್ಥಿತಿ ಪಾರ್ಟಿಯಾಗಿ ಮಾರ್ಪಟ್ಟಿರಕ್ತಸಾತ ಮತ್ತು ಭೀಕರ ಕ್ರಾಂತಿ ಅನಿವಾರ್ಯವೆಂದು ಪ್ರಧಾನಿ ಇಂದಿರಾರವರ ಹೇಳಿದರು.

ಹೈದರಾಬಾದು— ಕಳೆದವರ್ಷ ತಿರುಪತಿ ದೇವಾಲಯಕ್ಕೆ ಸರಕಾರ ರೂ 20 ಲಕ್ಷ ದಷ್ಟು ತುಪ್ಪ ಸರಬರಾಜು ಮಾಡಿತೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

ನವದೆಹಲಿ— ಆಗಸ್ ತಿಂಗಳಲ್ಲಿ ಬೆಲೆ ಶೇಕಡ-7 ಏರಿದೆ ಎಂಡು ಪ್ರಕಟವಾಗಿದೆ.

ತೆನುಘಾಟ್— ಭೂಗರ್ಭ ಸರ್ವೆ ಮುಖ್ಯಾಧಿಕಾರಿ ಶ್ರೀ ಸಿ. ಚಟರ್ಜಿಯವರು, ಭಾರತದ ರಾಜಧಾನಿಯನ್ನು ಡೆಲ್ಲಿಯಿಂದ ಬೇರೆ ಕಡೆಗೆ ವರ್ಗಾಯಿಸಬೇಕೆಂದ ಈ ಸಂಬಂಧದ ನಲ್ಗನೇ ಸಮ್ಮೇಳನದಲ್ಲಿ ಸಲಹೆ ಮಾಡಿದರು.

"Bank Road Bahusar — A Fair Price Shop in actual practice"

ನೇತಾಜಿಯವರ ನಿಧನದ ವಿಷಯದಲ್ಲಿ

ನವದೆಹಲಿ— ನೇತಾಜಿ ಬೋಸ್‌ರವರ ನಿಧನದ ಸಂದರ್ಭದ ಬಗ್ಗೆ ತನಿಖೆಗೆ ಸುತ್ತೊಂದು ಕಮಿಷ ನೇಮಕದ ವಿಷಯದಲ್ಲಿ ಸರ್ಕಾರ ಆಸಕ್ತಿ ಹೊಂದಿಲ್ಲವೆಂದು ತಿಳಿಸಲಾಗಿದೆ.

———

ಜರ್ಮನ್ ವಾರ್ತೆಗಳು

ಉರ್ಸ್‌ಬರ್ಗ್— ಕಣ್ಣುಗಳನ್ನು ಕಳಕೊಂಡವರಿಗೆ ಅಥವಾ ಕುರುಡರಾದವರಿಗೆ ನೇತ್ರದಾನ ಮಾಡಲು ಬೇಕಾಗುವ ಕಣ್ಣುಗಳನ್ನು ಸಾಯುವಾಗ ಸ್ವಇಚ್ಛೆಯಿಂದ ಒಪ್ಪಿಕೊಡುವವರ ಕಣ್ಣುಗಳನ್ನೂ ಶೇಖರಿಸಲು ಫೆಡರಾಲ್ ರಿಪಬ್ಲಿಕ್ ಜರ್ಮನಿಯಲ್ಲಿ " ಕಣ್ಣಿನ ನಿಧಿ " ಯೊಂದನ್ನು ಪ್ರಪ್ರಥಮವಾಗಿ ತೆರೆದಿದ್ದಾರೆ.

ಫ್ರಾಂಕ್‌ಫರ್ಟ್ ಅನುಮ್ಮೈ— ಇತ್ತೀಚೆಗೆ ಅಂಚೆ ಇಲಾಖೆಯಲ್ಲಿನ ವಿವಿಧ ವಿವಿಧ ದೇಶೀಯ ಸ್ಟ್ಯಾಂಪುಗಳನ್ನು ಶೇಖರಿಸುವುದು ಕೆಲವರಿಗೆ ಅತ್ಯಾದರದ ಕಾರ್ಯವಾಗಿದೆ ಇದಕ್ಕಾಗಿ ಫೆಡರಾಲ್ ಜರ್ಮನಿಯ ಅಂಚೇ ಇಲಾಖೆಯವರು ಪ್ರತ್ಯೇಕ ವ್ಯವಸ್ಥೆ ಮಾಡಿರುತ್ತಾರೆ. ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ 240000 ಸದಸ್ಯರಿದ್ದಾರೆ : 50 ರಾಷ್ಟ್ರಗಳಿಂದ 6500 ಮಂದಿ ಸ್ಟ್ಯಾಂಪು ಶೇಖರಣೆಯ ಉತ್ಸಾಹಿಗಳು ಜರ್ಮನಿಯಲ್ಲಿನ ಕಛೇರಿಗೆ ಕೇಳಿಕೆ ಕಳುಹಿಸುತ್ತಿರುತ್ತಾರೆ : ಒಂದು ವರ್ಷಕ್ಕೆ 18 ಮಿಲಿಯ ಸ್ಟ್ಯಾಂಪುಗಳು ರವಾನಿಸಲಾಗುತ್ತಿದೆ.

ಹ್ಯಾಂಬರ್ಗ್— ಸಮುದ್ರ ತಳದಲ್ಲಿ ಸಿಕ್ಕಿರುವ ಜಲಚರ ಪ್ರಾಣಿಗಳ ಅವಶೇಷಗಳಿಂದ ಮಿಸೆಸಿಪ್ಪಿ ಜಾತಿಗೆ ಸೇರಿದ " ಸಮುದ್ರದ ಬೆಕ್ಕು " (ಸೀ ಕ್ಯಾಟ್) ಎಂಬ ಪ್ರಾಣಿಯು ಮುನ್ನೂರು ಮಿಲಿಯ ವರ್ಷಗಳ ಹಿಂದೆಯೂ ಇದ್ದಿತೆಂಬ ಅಂಶವು ತಿಳಿದುಬಂದಿದೆ. (ಡಾಡ್— ಯು ಪಿ ಎಸ್)

20 ವರ್ಷಗಳ ಹಿಂದೆ ಅವನು ಸಮ್ಮು ಜಾಗಿಲು ಕಟ್ಟಿದ. ಆಗ ಸುಖ ಸಮೃದ್ಧಿ ಹುಡುಕೊಳಗೆ ಪ್ರವೇಶಿಸಿತು.

ವಲ್ಲಾ ಸೊಲಬ್ಬಗಳು

ಅವನು ಬಂದಾಗ ನಾವು ಅಷ್ಟು ಉತ್ಸಾಹವುಳ್ಳವರಾಗಿರಲಿಲ್ಲ. ಹಣಕಾಸಿನ ಬಗ್ಗೆ ಭದ್ರತೆಯನ್ನು ಪಡೆಯುವ ಭರವಸೆಯನ್ನೆತ್ತ. ಮನಸ್ಸಿನ ನಿಮ್ಮಧಿಯ ಬಗ್ಗೆ ಅವಧಾರಣೆ ಮಾಡಿದ. ಮಗನ ವಿದ್ಯಾಭ್ಯಾಸಕ್ಕಾಗಿ, ಮಗಳ ವಿವಾಹಕ್ಕಾಗಿ ಪ್ರಾಣಾ ಸಂತುಷ್ಟ ನಿವೃತ್ತಿ ಜೀವನಕ್ಕಾಗಿ ಹಣವನ್ನು ಪಡೆಯಲು ಸಾಧ್ಯವಿದೆಯೆಂದು ಹೇಳಿದ. ಆದರೆ ಹಲವಾರು ವರ್ಷಗಳಿಗೆ ಹಬ್ಬರುವ ಕಂತುಗಳಲ್ಲಿ ಪ್ರೀಮಿಯಮ್ ಕೊಡಬೇಕಾಗಿದ್ದ ಜೀವ ವಿಮಾ ಪಾಲಿಸಿಯಲ್ಲಿ ಉಳಿತಾಯವನ್ನು ಮಾಡಿದಲ್ಲಿ ಪ್ರಾರಂಭದಿಂದಲೇ ಸಂಪೂರ್ಣ ಹಣದ ಜವಾಬ್ದಾರಿಕೆಯನ್ನು ಜೀವ ವಿಮೆ ವಹಿಸಿಕ್ಕೊಳ್ಳುತ್ತದೆ ಯೆಂದು ಆತನು ಹೇಳಿದಾಗ ಕೂಡಲೆ ನಾವು ಅದಕ್ಕೆ ಗಮನಕೊಟ್ಟೆವು.
ಹೀಗೆ ನಾವು ಜೀವ ವಿಮೆಯಲ್ಲಿ ಉಳಿತಾಯವನ್ನು ಮಾಡಿದೆವು. ಮಾತ್ರವಲ್ಲ ನಾವು ಒಂದಕ್ಕಿಂತ ಅಧಿಕ ಪಾಲಿಸಿಗಳನ್ನು ಪಡಕೊಂಡೆವು. ಅವನು ಭರವಸೆಕೊಟ್ಟ ಸೌಲಭ್ಯಗಳೆಲ್ಲಾ ನಿಜರೂಪಕ್ಕೆ ಬಂದಿರುತ್ತವೆ. ಅವನೊಬ್ಬ ಬಹಳ ಸ್ನೇಹಭಾವದ ಹಾಗೂ ಉಪಯೋಗವುಳ್ಳ ವ್ಯಕ್ತಿ. ಅವನಾರು? ಹೌದು, ಓರ್ವ ಜೀವ ವಿಮಾ ಏಜಂಟ. ಎಲ್ಲವನ್ನೂ ತಿಳಿದ ವ್ಯಕ್ತಿ. ಸೇವೆಯನ್ನೊದಗಿಸುವ ವ್ಯಕ್ತಿ. ದೇವರು ಅವನನ್ನು ಆಶೀರ್ವದಿಸಲಿ.



ಜೀವ ವಿಮೆಗಿಂತ ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

ವುಡ್‌ಲ್ಯಾಂಡ್ಸ್ ತಾ. 5-9-69 ರಿಂದ
ಅವೋಷ ಪ್ರಾರಂಭ

— ಅತ್ಯಾಕರ್ಷಣೀಯ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್
ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅಪೆರಾ— 5-9-69 ರಿಂದ

.... ಚಿತ್ತಾಕರ್ಷ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಮಹಲ್

ಪಾತ್ರ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ
ಡೇವಿಡ್, ಅಜ್ರಾ, ಸುಧೀರ್

ನಿರ್ದೇಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜಿ ಆನಂದ್‌ಜಿ

ದಿನ 3 ಆಟಗಳು

Golden Jubilee of 'Satyavadi'
Sunday 28-9-1969

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah Sri Madhav Shenoi Sri Opera Talkies, Padmabhushana Dr. M.C Modi, Dr. R S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is well known that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

SHAKTI
SUDHA
A Superb Tonic

Edited, Printed Published by Dharmaprachara Nirata A S Krishna Rao (Proprietor) at the Satyavadi Press Chamarajapuram, Mysore 4